(ಇಂದು ದಿನಾಂಕ: 01-06-2022 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲು ಃ 3 ನೇ ಪ್ರತಿವಾದಿ ಪರ ಶ್ರೀ ಕೆ.ಎ.ಜೆ. ವಕೀಲರಿಂದ ಃ-**

ವಿರುಪನಗೌಡ ತಂದೆ ಮೃತಪಟ್ಟಿರುತ್ತಾರೆ ಎಂದರೆ ಸರಿ. 3 ನೇ ಪ್ರತಿವಾದಿಯ ಹೆಂಡತಿಯ ಹೆಸರು ಗೊತ್ತಿಲ್ಲ. ಅವರ ಮಕ್ಕಳ ಹೆಸರು ಗೊತ್ತಿಲ್ಲ. 3 ನೇ ಪ್ರತಿವಾದಿ ಖರೀದಿಸಿದ ಆಸ್ತಿಯನ್ನು ಪ್ರಭಾಕರ್ ರಾವ್ ಎಂದರೆ ಪ್ರತಿವಾದಿ ನಂ.4 ಇವರಿಗೆ ಮಾರಟ ಮಾಡಿರುತ್ತಾರೆ. ನನ್ನ ಮದುವೆ ಆದ ಸಮಯದಲ್ಲಿ ಒಬ್ಬ ಹೆಣ್ಣು ಮಕ್ಕಳ ಮದುವೆ ಮಾಡಲು ಅಂದಾಜು 35 ಸಾವಿರ ರೂಪಾಯಿಗಳಷ್ಟು ಖರ್ಚು ಬರುತ್ತಿತ್ತು. ಸದರಿ ಸಮಯದಲ್ಲಿ ಜಮೀನಿನ ಕಿಮ್ಮತ್ತು ಎಷ್ಟು ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಜಮೀನು ಮಾರಾಟ ಮಾಡಿದ ಸಮಯದಲ್ಲಿ ಪ್ರತಿ ಎಕರೆಗೆ ಜಮೀನಿನ ಬೆಲೆ ಒಂದು ಲಕ್ಷದಷ್ಟು ಇತ್ತು, ಈಗ ಪ್ರತಿ ಎಕರೆಗೆ ಜಮೀನಿನ ಬೆಲೆ 10- ರಿಂದ 15 ಲಕ್ಷ ಇರಬಹುದು.. ನನನ್ ತಂದೆ ಕಡೆಯಿಂದ ಜಮೀನು ಖರೀದಿಸಿದ್ದು, ಅದನ್ನು ಅಭಿವೃದ್ದಿಗೊಳಿಸಿ, ಅದರಲ್ಲಿ ನೀರಾವರಿ ಬೆಳೆಯನನ್ನು ಬೆಳೆದಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ಮುಂಚೆಯೇ ನಮ್ಮ ತಾತನವರು ಮಾಡಿದ್ದಾರೆ. 5 ನೇ ಪ್ರತಿವಾದಿ ತಿಪ್ಪನಹಟ್ಟಿ ಗ್ರಾಮದಲ್ಲಿರುತ್ತಾರೆ. ಅವರಿಗೆ ಸುಮಾರು 85 ವರ್ಷ ವಯಸ್ಸಾಗಿರಬಹುದು. ಯಾವುದೇ ಪಂಚಾಯತಿ ನಡೆದರು ಅಕ್ಕ-ಪಕ್ಕದ ಗ್ರಾಮದವರು 5 ನೇ ಪ್ರತಿವಾದಿಯನ್ನು ಹಿರಿಯರನ್ನಾಗಿ ಕರೆಯುತ್ತಾರೆ ಎಂದರೆ ನಾನು ಗಂಡನ ಮನೆಯಲ್ಲಿದ್ದರಿಂದ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಪ್ರತಿವಾದಿ ನಂ.3 ಮತ್ತು 5 ಇವರು ಒಬ್ಬರಿಗೊಬ್ಬರು ಸಂಬಂಧಿಕರು ಅಥವಾ ಇಲ್ಲ ಎಂದು ನನಗೆ ಗೊತ್ತಿಲ್ಲ. ಮೃತ 2 ನೇ ಪ್ರತಿವಾದಿ ಹಾಗೂ ನನ್ನ ತಂದೆಯ ಮಧ್ಯೆ ಯಾವುದೇ ವೈಷಮ್ಯ ಇರಲಿಲ್ಲ. ಮೃತ 2 ನೇ ಪ್ರತಿವಾದಿ ಶಾಲಾ ಶಿಕ್ಷಕರಾಗಿದ್ದರು ಎಂದರೆ ಸರಿ. ಅವರು ನಿವೃತ್ತಿ ಹೊಂದಿ ಮೃತಪಟ್ಟಿರುತ್ತಾರೆ ಎಂದರೆ ಸರಿ. ಮೃತ 2 ನೇ ಪ್ರತಿವಾದಿಗೆ ಇಬ್ಬರು

ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಇದ್ದಾರೆ. ನನ್ನ ತಂದೆ ನಮ್ಮ 8 ಜನ ಹೆಣ್ಣು ಮಕ್ಕಳ ಮದುವೆ ಮಾಡಲು ಹಣ ಬೇಕಾದ ಕಾರಣ, ಆಸ್ತಿ ಮಾರಾಟ ಮಾಡಿದ್ದು, ಬಂದ ಹಣದಿಂದ ನಮ್ಮ ಮದುವೆ ಮಾಡಿರುತ್ತಾರೆ ಹಾಗಾಗಿ ಅವರು ಮಾಡಿ ಕೊಟ್ಟಿರುವ ಖರೀದಿ ಕಾನೂನು ಪ್ರಕಾರ ಎಂದರೆ ಸರಿಯಲ್ಲ. ನಿ.ಪಿ.14 ಕ್ಕೆ ಯಾರು-ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು